ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಭೌತಶಾಸ್ತ್ರ ವಿಭಾಗ
2026-27

# ಪ್ರವೇಶ ಮಾಹಿತಿ ಪ್ರಕಟಣೆ

1. ಕವಿವಿ ಸುತ್ತೋಲೆ ಸಂಖ್ಯೆ No. KU/Aca/P.G./Ph.D/Crt/2026-27/11 Date: 10.07.2026 ಪ್ರಕಾರ ಪ್ರವೇಶ ಪಡೆಯುವ ಸಮಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1/ ಹಿಂದುಳಿದ ವರ್ಗ (2ಎ, 2ಬಿ, 3ಎ, 3ಬಿ) ಮತ್ತು ಅಲ್ಪಸಂಖ್ಯಾತರ (Muslim, Christian, Jain, Sikh, Boudha, Parsi) ವಿದ್ಯಾರ್ಥಿಗಳು ಎಸ್‌ಎಸ್‌ಪಿ ಪೋರ್ಟಲ್ (SSP Portal) ಮೂಲಕ ಶಿಷ್ಯವೇತನಕ್ಕಾಗಿ ಕಡ್ಡಾಯವಾಗಿ ಅರ್ಜಿ ಸಲ್ಲಿಸುವುದು. ಅಂತಹ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಶಿಷ್ಯವೇತನದ ಮೊತ್ತವು ವಿದ್ಯಾರ್ಥಿಗಳ ಖಾತೆಗೆ ನೇರವಾಗಿ ಜಮೆಯಾಗುತ್ತದೆ. ಆದ್ದರಿಂದ, ಸದರಿ ವಿದ್ಯಾರ್ಥಿಗಳು ಸನ್ 2026-27 ನೇ ಸಾಲಿನಲ್ಲಿ ಸ್ನಾತಕೋತ್ತರ ಪ್ರವೇಶ ಪಡೆಯುವ ಸಮಯದಲ್ಲಿ ಪೂರ್ಣ ಶುಲ್ಕವನ್ನು ಭರಿಸುವುದು.

2. ಮಹತ್ವದ ಸೂಚನೆ: 07.08.2026 ರಂದು ಭೌತಶಾಸ್ತ್ರ ವಿಭಾಗದ ಎರಡನೇ ಸುತ್ತಿನ ಕೌನ್ಸಲಿಂಗ್‌ನ ಮೊದಲ ಸೀಟ್ ಮ್ಯಾಟ್ರಿಕ್ಸ್‌ನ ಪ್ರಕಾರ ಉಳಿದ ಸೀಟುಗಳನ್ನು ಹಂಚಿಕೆ ಮಾಡಲಾಗುತ್ತದೆ. ನಂತರ ಉಳಿದ ಸೀಟುಗಳನ್ನು 400 ಪಾಯಿಂಟ್ ರೋಸ್ಟರ್ ಪ್ರಕಾರ ರೀ-ರೋಸ್ಟರ್ (Re-roaster) ಅಂದರೆ ಮರು ಮೀಸಲಾತಿ ಮಾಡಿ ಉಳಿದ ಕೆಟಗರಿಗಳಿಗೆ ಸೀಟುಗಳನ್ನು 2 ನೇ ಸುತ್ತಿನಲ್ಲಿಯೇ ಹಂಚಲಾಗುವುದು. ಆದ್ದರಿಂದ ಅಭ್ಯರ್ಥಿಗಳು ಈಗ ಪ್ರಕಟಿಸಲಾಗಿರುವ ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಅವರ ಕೆಟಗರಿ ಇಲ್ಲದಿದ್ದರೂ, ರೀ-ರೋಸ್ಟರ್ (Re-roaster) ದಿಂದ ಅವರ ಕೆಟಗರಿ ಸೀಟು ಬರುವ ಸಾಧ್ಯತೆ ಇರುತ್ತದೆ. ಆದಕಾರಣ ಎಲ್ಲ ಅಭ್ಯರ್ಥಿ ಗಳು 2 ನೇ ಕೌನ್ಸಲಿಂಗ್‌ಗೆ ಹಾಜರಾಗಲು ಸೂಚಿಸಲಾಗಿದೆ.

3. ಕವಿವಿ ಸುತ್ತೋಲೆ ಸಂಖ್ಯೆ No. KU/Aca/P.G./2026-27/20, Date: 05.08.2026 ರ ಪ್ರಕಾರ 2026-27 ನೇ ಸಾಲಿನ ಪ್ರಥಮ ವರ್ಷಕ್ಕೆ ಪ್ರವೇಶ ಪಡೆಯವ ವಿದ್ಯಾರ್ಥಿಗಳಿಗೆ ಸಾಮಾನ್ಯ ಶುಲ್ಕದಡಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ ಇನ್ನೂ ಸ್ಥಾನಗಳು ಖಾಲಿ ಉಳಿದರೆ ಅಂತಹ ಸ್ಥಾನಗಳಿಗೆ ರಾಜ್ಯದ ಬೇರೆ ಬೇರೆ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಖಾಲಿ ಇರುವ ಸ್ಥಾನಗಳಿಗೆ ಸಾಮಾನ್ಯ ಶುಲ್ಕದೊಂದಿಗೆ ಸಂಸ್ಕರಣಾ ಶುಲ್ಕದಡಿಯಲ್ಲಿ ಪ್ರವೇಶವನ್ನು ನೀಡಲಾಗುವುದು. ಅದೇ ರೀತಿ ಹಾವೇರಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೂ ಅನ್ವಯಿಸಲಾಗುವುದು.

ಸಹಿ
ಮುಖ್ಯಸ್ಥರು

ಕವಿವಿ ಸುತ್ತೋಲೆ ಸಂಖ್ಯೆ No